ಮೈಸೂರ ಗೆಜೆಟ.

ಸಂ. XXXI.] ಸರ್ಕಾರದಿಂದ ಘಾಯಿಷ್ ಆದ್ದು. [ನಂ. 36.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 10, ಸ॥ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ರು, ರಜಿಸ್ಟ್ರೇರ್ಷ ವ ಯುಡ್ಯು ಕೇರ್ಷ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೋಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ಮತ್ತೆರೆ ಕಾಲಸ್ಥತೀ ರಿಪೋರ್ಟುಗಳು; ಪೋಸ್ಟ್ ಆಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇರ್ಷಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಸೂಚನೆ. ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 1ನೇ ಸೆಪ್ಟಂಬರ್ 1896.

ನಂ. 2612.—ಜು. 306, ಮೈಸೂರ್ ಸರ್ವಿಸ್ ರೆಗ್ಯುಲೇರ್ಷಗಳ 203 (b)ನೇ ಆರ್ಟಿಕಲ್ ಅನುಸರಿಸಿ, ಶ್ರೀರಂಗಪಟ್ಟಣದ ಮ್ಯುನಿಸಿಫ್ ಮೆಸ್ಟ್ರ ಎ. ಟಿ. ಗೋಪಾಲಯ್ಯಂಗಾರ್ ಯವರಿಗೆ, 1896ನೇ ಮಾರ್ಚಿ 13ರ ಲಾಗಾಯತು 23ನೇ ತಾರೀಖು ವರೆಗೆ ನಿಸ್ಬೆ ತಲಬಿನ ಮೇಲೆ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿತ್ತು.

ನಂದೀದುರ್ಗ ಡಿವಿಜ್ ಡಿಸ್ಟ್ರಿಕ್ಟು ಕೋರ್ಟು ಶಿರಸ್ತೇದಾರ್ ವೈದ್ಯಲಿಂಗಂ ಮೊದಲಿಯಾರ್ರು, ಸದರೀ ಎ. ಟಿ. ಗೋಪಾಲಯ್ಯಂಗಾರ್ರು ರಜಾದ ಮೇಲಿದ್ದ ಕಾಲದಲ್ಲಿ ಈಜೇ ಗ್ರೇಡಿನಲ್ಲಿ ಶ್ರೀರಂಗಪಟ್ಟಣದ ಮ್ಯುನಿಸಿಫರಾಗಿ ಆಕ್ಟಿಂಗ್ ತರೀಕ್ ಇದ್ದರು.

ನಂ. 3122.—ಜು. 316, ಮೈಸೂರ್ ಗವರ್ನಮೆಂಟ್‌ನವರು ಸಕಲ ಜನರ ತಿಳುವಳಿಕೆ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವ ದೇನಂದರೆ,—1896ನೇ ಸೆಪ್ಟಂಬರ್ 15ನೇ ತಾರೀಖಿನ ಲಾಗಾಯತು ವ ಆ ತರುವಾಯ "ಶಿವಮೊಗ್ಗಾ ಸಬಾರ್ಡಿನೇಟ್ ಜಡ್ಜರ ಕೋರ್ಟು" ಯಂಬದಾಗಿ ಕರಿಯಲ್ಪಡತಕ್ಕ ಒಂದು ಸಬಾರ್ಡಿನೇಟ್ ಜಡ್ಜರ ಕೋರ್ಟು ಶಿವಮೊಗ್ಗೆಯಲ್ಲಿ ಸ್ಥಾಪಿಸಲ್ಪಡುವದು, ಮತ್ತು ಸದರೀ ಕೋರ್ಟಿಗಾಗಿ ಮೊಕರರ್ರಾಡಲ್ಪಟ್ಟ ಸಬಾರ್ಡಿನೇಟ್ ಜಡ್ಜರು 1883ನೇ ಇಸವಿಯ ಮೈಸೂರ್ ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ 9ನೇ ಸೆಕ್ಷರ್ಷ ಅನುಸರಿಸಿ, ಒಬ್ಬ ಸಬಾರ್ಡಿನೇಟ್ ಜಡ್ಜರ ಅಧಿಕಾರವನ್ನು ಶಿವಮೊಗ್ಗ, ಕಡೂರು ವ ಚಿತ್ರದುರ್ಗ ರೆವಿನ್ಯೂ ಡಿಸ್ಟ್ರಿಕ್ಟುಗಳ ಸ್ಥಳ ನರಹದ್ದುಗಳಲ್ಲಿ ಚಲಾಯಿಸತಕ್ಕದ್ದು.

ತಾರೀಖು 2ನೇ ಸೆಪ್ಟೆಂಬರ್ 1896.

ನಂ. 3170.—ಲೋ. ಫಂ. 178—92, ಮೆಸ್ಸರ್ ಸೈಯದ್ ಆಲಿ ಸಾಹೆಬರು ರಾಜೀನಾಮೆ ಕೊಡಲ್ಪಟ್ಟ, ಮೆಸ್ಸರ್ ಮೊಹ ಬೀರ್ ಸಾಹೆಬರ ಸ್ಥಳದಲ್ಲಿ (ಬೆಂಗಳೂರು ಡಿಸ್ಟ್ರಿಕ್ಟ್) ಜೊಸಕೋಟೆ ಮ್ಯುನಿಸಿಪಾಲಿಟಿಯ ಮೆಂಬರಾಗಿ ನೊಕರಮ್ಮಾಡಲ್ಪಟ್ಟಿರುತ್ತಾರೆ.

ತಾರೀಖು 4ನೇ ಸೆಪ್ಟೆಂಬರ್ 1896.

ನಂ. 3303.—ಜು. 330, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, ಹೊಸನ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಟಿ. ಪರಮಶಿವಅಯ್ಯರ್, ಬಿ. ಎ. ಯವರು 2ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ನೊಕರಮ್ಮಾಡಲ್ಪಟ್ಟಿರುತ್ತಾರೆ.

ತಾರೀಖು 5ನೇ ಸೆಪ್ಟೆಂಬರ್ 1896.

ನಂ.3342.—ಜು. 333, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 203 (b)ನೇ ಆರ್ಟಿಕಲ್ ಅನುಸರಿಸಿ, ನಂದೀದುರ್ಗ ಡಿವಿಜನಿನ ಡಿಸ್ಟ್ರಿಕ್ಟ್ ಮ ಸೆಷನ್ಸ್ ಜಡ್ಜ್ ಮೆಸ್ಸರ್ ಟಿ. ನರಹರಿರಾವ್, ಎಂ. ಎಲ್. ಯವರಿಗೆ, 1896ನೇ ಆಗಸ್ಟ್ 1ನೇ ಮುಕ್ತಂ 1760.—ಜು. 189ನೇ ನಂಬರ್ ಇಸ್ತಿಹಾರ್‌ನಾನೆಯಲ್ಲಿ ಮಂಜೂರಾಗಿದ್ದ ಒಂದು ತಿಂಗಳ ಪ್ರಿವಿಲೀಜ್ ರಜಾಕ್ಕೆ ಜಾಸ್ತಿಯಾಗಿ ಇನ್ನೂ ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮೆಸ್ಸರ್ ಎಸ್. ಆರ್. ಸುಬ್ರಾಯ ಅಯ್ಯರ್, ಬಿ. ಎ., ಯವರು ಸದರೀ ಮೆಸ್ಸರ್ ನರಹರಿರಾಯರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ನಂದೀದುರ್ಗ ಡಿವಿಜನಿನ ಡಿಸ್ಟ್ರಿಕ್ಟ್ ಮ ಸೆಷನ್ಸ್ ಜಜ್ಜರಾಗಿ ಆಕ್ಟಿಂಗ್ ತರೀಕ್ ಇರತಕ್ಕದ್ದು.

3. ಮೆಸ್ಸರ್ ಪಿ. ಸಿಂಗ್ರಾಚಾರ್ರವರೂನೂ, ಸದರೀ ಮೆಸ್ಸರ್ ಸುಬ್ರಾಯ ಅಯ್ಯರ್ ಮುಪರು ಬೇರೇ ಕೆಲಸದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಮೈಸೂರ್ ನೆಬಾರ್ಡಿನೇಟ್ ಜಜ್ಜರಾಗಿ ಆಕ್ಟಿಂಗ್ ತರೀಕ್ ಇರತಕ್ಕದ್ದು.

ತಾರೀಖು 7ನೇ ಸೆಪ್ಟೆಂಬರ್ 1896.

ನಂ. 3389.—ಜು. 346, ನಾಗರದ ಮ್ಯುನಿಸಿಫ್ ಮೆಸ್ಸರ್ ಬಿ. ಬಸವಾರಾಧ್ಯ, ಬಿ. ಏ., ಬಿ. ಎಲ್., ಯವರಿಗೆ ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 203 (b)ನೇ ಆರ್ಟಿಕಲ್ ಅನುಸರಿಸಿ, ನಿಸ್ಬ್ತ ತಬಿನಮೇಲೆ, 1896ನೇ ಆಗಸ್ಟ್ 24ನೇ ಮುಕ್ತಂ ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೈಸೂರ್ ಆಕ್ಟಿಂಗ್ ಮ್ಯುನಿಸಿಫ್ ಮೆಸ್ಸರ್ ಎಸ್. ಶೇಷಗಿರಿಐಯರು, ಸದರೀ ಮೆಸ್ಸರ್ ಬಿ. ಬಸವಾರಾಧ್ಯರವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ನಾಗರದ ಮ್ಯುನಿಸಿಫರಾಗಿ ಆಕ್ಟಿಂಗ್ ತರೀಕ್ ನೊಕರಮ್ಮಾಡಲ್ಪಟ್ಟಿರುತ್ತಾರೆ. ಕೂಡ್ಲೆ ಕೆಲಸದ ಮೇಲೆ ಹೋಗಿ ಶೇರತಕ್ಕದ್ದು.

ಮೈಸೂರ್ ಅಡಿಷನಲ್ ಮ್ಯುನಿಸಿಫ್ ಮೆಸ್ಸರ್ ವಿ. ರಂಗಸ್ವಾಮಿಕಾರಿ, ಬಿ. ಏ., ಬಿ. ಎಲ್., ಯವರು ತಮ್ಮ ಕೆಲಸಗಳೊಂದಿಗೆ ಹಂಗಾಮಿಯಾಗಿ ಮೈಸೂರ್ ಮ್ಯುನಿಸಿಫ್ ಕೋರ್ಟಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 20ನೇ ಆಗಸ್ಟ್ 1896.

ನಂ. 2506.—ಲೋ. ಫಂ. 257.—92, ಸ್ರ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ತರೀಕೆರೆ ಮ್ಯುನಿಸಿಪಾಲಿಟಿಯ ಹಿಂದೂ ಸ್ಮಶಾನಕ್ಕೆ ಹೋಗುವ ಬಗ್ಗೆ ಮಾರ್ಗ ಮಾಡುವದಕ್ಕಾಗಿ ಬೇಕಾಗಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಡುವಳಿದಾರರ ಹೆಸರು.	ಸರ್ವೆ ನಂಬರ್.	ಬೀಜವರಿ. ಎ. ಗುಂಟೆ.	ಬೇರೀಜು. ರೂ. ಆ. ಪೈ.	ತಗದುಕೊಳ್ಳಬೇಕಾದ ವಿಸ್ತೀರ್ಣ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	ಪ್ರಸ್ತಾವನೆಯ ಅದು ಲಾಗಾಯ್ತು ನಡವಳಿಕೆಯಲ್ಲಿರುವದು.	ಷರಾ.
ಕಡೂರು	ತರೀಕೆರೆ	ನಾಲ್ಕು ಮೊಳ್ಳಿಘಟ್ಟ	ಪಟ್ಟಣಶೆಟ್ಟರ ಹಂಜಪ್ಪ ಗುಂಡಪ್ಪನು	11	2	29	8	0	ಹುಲಿಯಾ ಬೆ॥ ಭೂಪಾಲನ ಸರ್ವೆ ನಂ. 10	ದನಗಳು ಮೇಯುವಾ ಬಗ್ಗೆಯಾ ಬಿಟ್ಟಿರುವ ಕೆ॥ ಬೆ॥ ನಂ. 15 ಪ ಸರ್ವೆ ನಂ. 5ರ ಭಾಗ	ಕಲ್ಲು ಬೆ॥ ಬಿಟ್ಟಿರುವಾಪಾಲನ ನಂ. 13	ಪಟ್ಟಣಶೆಟ್ಟರ ಹೆಂಜಪ್ಪ ಗುಂಡಪ್ಪನ ನಂ. 9	75 ರೂ. ಆ. 0	0 ಪೈ.

ತಾರೀಖು 28ನೇ ಆಗಸ್ಟ್ 1896.

ನಂ. 2855.—ಮಿ. 487, ಗ್ವಾಲಿಯರ್ ರೆಸಿಡೆಂಟರವರಿಂದ ಮೈಸೂರ್ ರೆಸಿಡೆಂಟರವರ ಫಸ್ಟ್ ಅಸಿಸ್ಟೆಂಟ್‌ರವರ ಮೂಲಕ ತಲ್ಪಿದ ಗ್ವಾಲಿಯರ್ ಸಂಸ್ಥಾನದಿಂದ ಕೊಡಲ್ಪಟ್ಟ ಈ ಕೆಳಗೆ ಕಂಡ ಇಸ್ತಿಹಾರು ಸಕಲ ಜನರ ತಿಳುವಳಿಕೆ ಬ್ಯಾಗಿ ಘಾಯಮಷ್ಯಡ ಲ್ಪಟ್ಟಿರುತ್ತೆ:—

ಇಸ್ತಿಹಾರ್.

ಉಜ್ಜನಿಯಲ್ಲಿ 1897ನೇ ಇಸವಿಯಲ್ಲಿ ನಡಿಯುವ ಸಿಹ್ನಸ್ತ ಮೇಲಾಕ್ಕೆ ವಿಶೇಷ ಜನ ಸಂಘವು ನಿರೀಕ್ಷಿಸಲ್ಪಟ್ಟಿರುತ್ತೆ. ಸ್ ೧೮೮೫ನೇ ಇಸವಿಯಲ್ಲಿ ಪ್ರಾಪ್ತವಾಗಿದ್ದಂತೆ ಘೋರವಾದ ಕಲರಾ ಉಪದ್ರವವು ಸಾಧ್ಯವಾದ ಮಟ್ಟಿಗೆ ನಿರೋಧಪಡಿಸುವ ಬ್ಯಗ್ಯೆ ಈ ಕೆಳಗೆ ಕಂಡ ವಿರ್ಮಾಡುಗಳು ಪ್ರಜೆಗಳ ಕ್ಷೇಮಾರ್ಥವಾಗಿ ಹುಕುಂ ಮಾಡಲ್ಪಟ್ಟಿರುತವೆ, ಮತ್ತು ಅವುಗಳು ಖಂಡಿತವಾಗಿ ಆಚರಿಸ ಲ್ಪಡತಕ್ಕದ್ದು:—

I. 1897ನೇ ವರುಷದ ಸಿಹ್ನಸ್ತ ಮೇಲಾಕ್ಕೆ ಬರತಕ್ಕ ಯಾತ್ರಿಕರು ಉಜ್ಜನಿ ಪಟ್ಟಣವನ್ನ ಪ್ರವೇಶ ಮಾಡುವದರಿಂದಲೂ ಯಾ ಸಿಪ್ರಾನದಿಯ ಧಡಗಳಲ್ಲಿ ವಾಸಮಾಡುವದರಿಂದಲೂ ನಿರೋಧಿಸಲ್ಪಟ್ಟಿರುತ್ತಾರೆ.

II. ಪರಸ್ಪರ ಮತವಿರೋಧಿಗಳು ಅವರವರ ಸ್ನಾನಘಟ್ಟಗಳಿಗೆ ಹೋಗುವಾಗ್ಯೂ ಮತ್ತು ಬರುವಾಗ್ಯೂ ಉಸ್ತುವಾರಿಯಿಂದ ಒಯ್ಯಲ್ಪಡುವರು. ಮೇಲಾವಿನ ಚಾರ್ಜಿನಲ್ಲಿರುವ ಆಫಿಸರರಿಂದ ಕೊಡಲ್ಪಡುವ ಇಸ್ತಿಹಾರುಗಳಿಂದ ಮುಂದೆ ನಿರ್ಣಯಿಸಲ್ಪಡಬಹು ದಾದ ಸ್ನಾನಘಟ್ಟಗಳಲ್ಲೂ ಮತ್ತು ಕಾಲಗಳಲ್ಲೂ ಮಾತ್ರ ಸಿಪ್ರಾ ನದಿಯಲ್ಲಿ ಸ್ನಾನ ಮಾಡತಕ್ಕದ್ದು.

III. ಯಾತ್ರಿಕರು ಮೇಲಾವಿನ ಚಾರ್ಜಿನಲ್ಲಿರುವ ಆಫಿಸರಿಂದ ಕೊಡಲ್ಪಡಬಹುದಾದ ಕ್ಯಾಸರ್ವೆಸಿ ರೆಗ್ಯುಲೇಷ್ಯೆಗಳಿಗೆ ವಿಧೇ ಯರಾಗಿರತಕ್ಕದ್ದು.

IV. ಯಾತ್ರಿಕರು ಸಿಪ್ರಾನದಿಯ ಉದಕವನ್ನ ಪಾನಮಾಡುವ ಕೆಲಸಗಳಿಗಾಗಿ ಉಪಯೋಗಪಡಿಸಕೂಡದು. ಯಾತ್ರಿಕರಿಗೆ ನಿರ್ಮಲವಾದ ನೀರು ಸರಬರಾಯಿ ಮಾಡುವ ಬಗ್ಯೆ ಮೊದಲಿಗಿಂತಿರುವದಕ್ಕೆ ಜಾಸ್ತಿಯಾಗಿ ಸಾಕಾದ ಮಟ್ಟಿಗೆ ಭಾವಿಗಳು ಸಿದ್ಧಪಡಿಸ ಲ್ಪಡುವವು.

V. ಯಾತ್ರಿಕರು ಈ ಪಾನಮಾಡುವ ಭಾವಿಗಳಿಗೆ ಶೀದಾ ಪ್ರವೇಶ ಮಾಡಕೂಡದು. ಸರ್ಕಾರ್ ವಿಚಾರಣೆಗೆ ವಳಪಟ್ಟು ನೀರು ಬಟ್ಟೆಯ ಚೀಲಗಳ ಮೂಲಕವಾಗಿ ತೊಟ್ಟಿಗಳಲ್ಲಿ ಸೇದಿ ತುಂಬಿಸಲ್ಪಡುವದು. ಸದರೀ ತೊಟ್ಟಿಗಳಿಂದ ನೀರು ಅವುಗಳ ರಂಧ್ರಮೂಲ ಕ ತೆಗದುಕೊಳ್ಳಬೇಕು. ಇವುಗಳು ಸದರೀ ಕೆಲಸಕ್ಕಾಗಿ ಸರಕಾರದಿಂದ ನೇಮಿಸಲ್ಪಡುವ ಬ್ರಾಹ್ಮರ ವಶದಲ್ಲಿರತಕ್ಕದ್ದು.

VI. ಕೋರದಂತೆ ರೈಲ್ವೆ ಕಂಪನಿಯವರು ಯಾತ್ರಿಕರು ಇಳಿಯುವ ಸ್ಥಳಗಳಿಗೆ ಸೈಡಿಂಗ್ಸ್‌ಯಾನೆ ಕಟ್ಟಡಗಳನ್ನ ಕಟ್ಟುವ ಪಕ್ಷಕ್ಕೆ ಮೇಲಾಕ್ಕೆ ಬರುವ ಜನಗಳು ಉಜ್ಜನಿ ರೈಲ್ವೆ ಸ್ಟೇಷನಿನಲ್ಲಿ ಇಳಿಯುವದಕ್ಕೆ ಅವಕಾಶ ಕೊಡಲ್ಪಡಲಾದದು.

ಲಷ್ಕರ್ ತಾರೀಖು 3—7—96.

ಎಂ. ಜೆ. ರೋಸ್,
ಗ್ವಾಲಿಯರ್ ಹುಜೂರ್ ದರ್ಬಾರ್,
ಚೀಫ್ ಸೆಕ್ರಟೆರಿ.

ತಾರೀಖು 29ನೇ ಜುಲೈ 1896.

ನಂ. 1144.—ರೆ. 427, ಸ್ ೧೮೮೮ನೇ ಇಸವಿಯ IVನೇ ರೆಗ್ಯುಲೇಷನಿನಿಂದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನಿನ 2ನೇ ಪ್ಯಾರಾ ಅನುಸರಿಸಿ ಮೈಸೂರ್ ಗವರ್ಮೆಂಟಿನವರು, ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳನ್ನ ನೆಲವಂಗಲ ತಾಲ್ಲೂಕಿನಲ್ಲಿರುವ ಕಾಯಂಗುಂತ್ತಾ ಕುಲಿಪುರ ಗ್ರಾಮಕ್ಕೆ ಲಗಾವ್ ಮಾಡುವ ಬಗ್ಯೆ, ಅಧಿಕಾರ ಹೊಟ್ಟಿ ರುತ್ತಾರೆ.

ತಾರೀಖು 11ನೇ ಆಗಸ್ಟ್ 1896.

ನಂ. 1548.—ಎಕ್ಸೈಸ್. 62, ಸ್ ೧೮೯೩ನೇ ಜನವರಿ 14ನೇ ಮಕ್ಕುಂ 11813—ರೆ. ಫೈ. 233–92ನೇ ನಂಬರ್ ಗವರ್ಮೆಂಟ್ ಇಸ್ತಿಹಾರ್‌ನಾಮೆಯಲ್ಲಿರುವ Vನೇ ರೂಲಿನ 6ನೇ ಪ್ಯಾರಾ (13)ನೇ ಕ್ಲಾಜಿಗೂ ಮತ್ತು ಸದರೀ ಇಸ್ತಿಹಾರ್‌ನಾಮೆಗೆ ಕೇರಿಸಿರುವ "ಎ" ಲೈಸೆನ್ಸಿನ 4 (4)ನೇ ಷರತ್ತಿಗೂ ಈ ಕೆಳಗೆ ಕಂಡದ್ದನ್ನ ಬದಲಾಗಿ ಕೇರಿಸುವ ಬ್ಯಗ್ಯೆ ಮೈಸೂರ್ ಗವರ್ಮೆಂಟಿನವ ರು ಅಪ್ಪಣೆ ಕೊಡುತ್ತಾರೆ.

ರೆವಿನ್ಯೂ ಬೋರ್ಡಿನ ಸ್ಟ್ಯಾಂಡಿಂಗ್ ಆರ್ಡರುಗಳ XIನೇ ಅಧ್ಯಾಯದ 170ನೇ ರೂಲಿನ 4ನೇ ಪ್ಯಾರಾವಿಗೆ ಬಳಪಟ್ಟುಮಾಡ

XIನೇ ಅಧ್ಯಾಯ, 170ನೇ ರೂಲ್, 4ನೇ ಪ್ಯಾರಾ "ಬಳ್ಳಾರಿ, ಅನಂತಪುರ, ಕಡಪ, ಉತ್ತರ ಆರ್ಕಾಟು, ಸಾಲ್ಯ ಮತ್ತು ಕೊಯಿಮುತ್ತೂರು ಡಿಸ್ಟ್ರಿಕ್ಟುಗಳ ಕಲೆಕ್ಟರುಗಳು ಮೈಸೂರಿಂದ ಮತ್ತು ಮೈಸೂರಿಗೆ ಕೇಂದಿಯನ್ನ ಆಮದ್‌ರಫ್ತ್ ಮಾಡುವ ಬಗ್ಯೆ ಅಪ್ಪಣೆ ಕೊಡಬಹುದು. ಪರಂತು ಕೇಂದಿಯು ಶೀದಾ ರಫ್ತ್ ಮಾಡಲ್ಪಡುವ ಇಜಾರೆ ಸ್ಥಳಗಳ ಗುತ್ತಿಗೆದಾರ್ರಿಗೆ ಮಾತ್ರವೇ ರಹದಾರಿಗಳು ಕೊಡಲ್ಪಡತಕ್ಕದ್ದು."

ರಾಸ್ ಪ್ರೆಸಿಡೆನ್ಸಿಯಲ್ಲಿರುವ ಬಳ್ಳಾರಿ, ಅನಂತಪುರ, ಕಡಪ ಉತ್ತರ ಆರ್ಕಾಟು, ಸಾಲ್ಯ ಮತ್ತು ಕೊಯಿಮುತ್ತೂರು ಡಿಸ್ಟ್ರಿಕ್ಟುಗಳಿಂದ ಮತ್ತು ಸದರೀ ಡಿಸ್ಟ್ರಿಕ್ಟುಗಳಿಗೆ ಕೇಂದಿಯನ್ನ ಆಮದ್‌ರಫ್ತ್ ಮಾಡುವ ಬಗ್ಯೆ ಬೆಂಗಳೂರು, ಕೋಲಾರ, ತುಮಕೂರು, ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಡಿಪ್ಯುಟಿ ಕಮಿಷ್ಶನರುಗಳು ಅವರುಗಳ ಯುಕ್ತಾನುಸಾರ ಅಪ್ಪಣೆ ಕೊಡಬಹುದು. ಸದರೀ ಆರ್ಡರಿನ ಯಕ್ಸ್‌ಟ್ರಾಕ್ಟು ಅಂದರೆ ಭಾಗವು ಇದರ ಬಾಜೂದಲ್ಲಿ ಕಾಣಿಸಿರುತ್ತೆ.

ತಾರೀಖು 17ನೇ ಆಗಸ್ಟ್ 1896.

ನಂ. 1874.—ರೆ. 705, ಮೈಸೂರ್ ಡಿಸ್ಟ್ರಿಕ್ಟ್ ಮಳವಳ್ಳಿ ತಾಲ್ಲೂಕಿಗೆ ಶೇರಿಸೋಣಾದ ಗ್ರಾಮಗಳನ್ನ ತೋರಿಸುವ ಇದಕ್ಕೆ ಜಂಟಿನಲ್ಪಟ್ಟ ತಖ್ತೆಯ ಸರ್ವರ ತಿಳುವಳಿಕೆ ಬಗ್ಗೆ ಘಾಯಿಷ್ ಮಾಡಲ್ಪಟ್ಟಿರುತ್ತೆ.

ಮಾಗಣಿ.	ನಂಬರ್.	ಇಟ್ಟುಕೊಳ್ಳುವ ಬಗ್ಗೆ ಉದ್ದೇಸಿಸಿದ ಗ್ರಾಮಗಳ ಹೆಸರುಗಳು.	ನಂಬರ್.	3ನೇ ಕಾಲಮಿನಲ್ಲಿ ನಮೂದ್ಮಾಡಲ್ಪಟ್ಟಿರುವ ಗ್ರಾಮಗಳಿಗೆ ಶೇರಿಸಲ್ಪಡಬೇಕಾದ ಗ್ರಾಮಗಳ ಹೆಸರುಗಳು.	ಪರಾ.
1	2	3	4	5	6
ಮಳವಳ್ಳಿ ..	1	ಸೆಟ್ಟಕಲ್ಲು	1	ಕಾಡಂಕನಹಳ್ಳಿ	
ಗೌಡಗೆರೆ ..	2	ಅಂತರವಳ್ಳಿ	2	ಹೊಸಹಳ್ಳಿ	

ತಾರೀಖು 27ನೇ ಸೆಪ್ಟಂಬರ್ 1896.

ನಂ. 2264.—ರೆ. ಫೈ. 99—95, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 173ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್ದಾರ್ ಡಿ. ಸುಬ್ಬರಾಯರಿಗೆ, 1896ನೇ ಆಗಸ್ಟ್ 24ನೇ ಮುಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ಹುಳಿಯಾರ್ ಸಬ್ ತಾಲ್ಲೂಕಿನ ಡೆಪ್ಯೂಟಿ ಅಮಲ್ದಾರ್ ಬಿ. ಸಿ. ಕೇಶವಯ್ಯನವರು ತಮ್ಮ ಕೆಲಸಗಳೊಂದಿಗೆ ಸದರೀ ಅಮಲ್ದಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ನಂ. 2289.—ಘಾ. ಫೈ. 104—95, ಹಾಸನ ಡಿಸ್ಟ್ರಿಕ್ಟ್ ಘಾರೆಸ್ಟ್ಗಳ ಡೆಪ್ಯೂಟಿ ಕ್ವರ್ಸರ್ವೇಟರ್ ಮೆಸ್ಸರ್ ಎಸ್. ಏ. ಬಾಪೂರಾಯರಿಗೆ, 1896ನೇ ಆಗಸ್ಟ್ 17ನೇ ಮುಕ್ತಂ 1838.—ಘಾ. ಫೈ. 104-95ನೇ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ ಐದು ದಿನಗಳ ಕ್ಯಾಜುಯಲ್ ರಜಾ ಇನ್ನೂ ಎರಡು ದಿನಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 28ನೇ ಆಗಸ್ಟ್ 1896.

ನಂ. 2284.—ರೆ. ಫೈ. 138-95, ತಿರುಮಕೂಡ್ಲು ನರಸೀಪುರದ ತಾಲ್ಲೂಕಿನ ಅಮಲ್ದಾರ್ ಹನುಮಂತರಾಯರಿಗೆ, 1896ನೇ ಜೂ 10 ವ 16ನೇ ಮುಕ್ತಂಗಳ 10770.—ರೆ. 4249 ಮತ್ತು 10945.—ರೆ. ಫೈ. 138—95ನೇ ನಂಬರುಗಳ ಗವರ್ಮೆಂಟ್ ಇಸ್ತಿಹಾರ್ನಾಮೆಗಳಲ್ಲಿ ಕೊಡಲ್ಪಟ್ಟಿದ್ದ ಮೂರು ತಿಂಗಳ ಪ್ರಿವಿಲೀಜ್ ರಜಾ ಪೈಕಿ 1896ನೇ ಮೇ 11ನೇ ತಾರೀಖು ಲಾಗಾಯತು ಜುಲೈ 7ನೇ ಮುಕ್ತಂ ವರೆವಿಗೆ ಪುಭಯ ದಿನಗಳೂ ಕೇರಿ ಉಪಯೋಗಿಸಿಕೊಂಡ ಸಬಬ್ ಉಪಯೋಗಿಸಿಕೊಳ್ಳದ ರಜಾ ಭಾಗವು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ನಂ. 2358.—ಘಾ. ಫೈ. 27—95, ಸ್ ಸ್ 1896ನೇ ಏಪ್ರಿಲ್ 15ನೇ ಮುಕ್ತಂ 278—ಡಿ. ಟಿ. ನೇ ನಂಬರ್ ಗವರ್ಮೆಂಟ್ ಇಸ್ತಿಹಾರ್ನಾಮೆಯಲ್ಲಿ ಮೆಸ್ಸರ್ಸ್ ವೈ. ಶೀತಾರಾಮಯ್ಯನವರು, ಬಿ. ರಾಮಸ್ವಾಮಿ ಅಯ್ಯರ್ ಯವರು ಮತ್ತು ಕೆ. ಶಾಮಯ್ಯಂಗಾರಿ ಯವರು ಇವರುಗಳನ್ನ ಕೋಲಾರ, ಚಿತ್ರದುರ್ಗ ವ ಷಿಕಾರಿಪುರ ಸಬ್ ಡಿವಿಜನಿಗೆ ಹುಕುಂ ಮಾಡಿದ್ದ ವರ್ಗಾವರ್ಗಿಗಳು ರದ್ದು ಮಾಡಲ್ಪಟ್ಟಿರುತವೆ.

2. ಮೆಸ್ಸರ್ ವೈ. ಶೀತಾರಾಮಯ್ಯನವರು ಕಡೂರು ಡಿಸ್ಟ್ರಿಕ್ಟಿಗೆ ಸ್ಪೆಷಲ್ ಟ್ಯೂಟಿಗಾಗಿ ನಿಯಮಿಸಲ್ಪಟ್ಟಿರುತ್ತಾರೆ. (ರಜಾ ದಿಂದ ವಾಪಸ್ ಬಂದ ತರುವಾಯ ಕೆಲಸಕ್ಕೆ ಹೋಗಿ ಶೇರತಕ್ಕದ್ದು.

ನಂ. 2400.—ರೆ. ಫೈ. 31—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ್ ಗವರ್ಮೆಂಟ್ ಕಂಟ್ರೋಲರ್ ಮೆಸ್ಸರ್ ಈ. ಆರ್. ಸುಬ್ಬಾಯರ್ ಯವರಿಗೆ, 1896ನೇ ಆಗಸ್ಟ್ 24ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 31ನೇ ಆಗಸ್ಟ್ 1896.

ನಂ. 2362.—ರೆ. ಫೈ. 161-92, ಸ್ ಸ್ 1896ನೇ ಜುಲೈ 29ನೇ ಮುಕ್ತಂ 1173.—ರೆ. ಫೈ. 161-92ನೇ ನಂಬರ್ ಇಸ್ತಿಹಾರ್ನಾಮೆ ಅನುಸರಿಸಿ, ಮೈಸೂರ್ ಗವರ್ಮೆಂಟಿನವರು ಅಪ್ಪಣೆ ಕೊಡುವದೇನಂದರೆ,—ಮೈಸೂರ್ ಸ್ಟೇಟ್ ರೈಫಲ್ಸ್ ಇಷೂರ್ಮೆಸಿಗೆ ಸಂಬಂಧಪಟ್ಟ ರೂಲ್ಸಿನ 6ನೇ ರೂಲಿಗೆ ಈ ಕೆಳಗೆ ಕಂಡದ್ದು ಬದಲಾಗಿ ಸೇರಿಸಲ್ಪಡತಕ್ಕದ್ದು:—

6. "ಈ ರೂಲುಗಳು ಜಾರೀಗೆ ಬಂದ ತರುವಾಯ ಮೈಸೂರ್ ಗವರ್ಮೆಂಟ್ ನವುಕರಿಗೆ ದಾಖಲಾಗಬಹುದಾದ ದೆರೋಬಸ್ತು "ಜನಗಳೂ ಅವರು ಗವರ್ಮೆಂಟ್ ನವುಕರಿಗೆ ದಾಖಲಾಗುವ ತಾರೀಖಿನಿಂದಲೂ ಆಥವಾ 21 ವರುಷಗಳ ವಯಸ್ಸಿನ ಪೂರ್ವವೇ "ಗವರ್ಮೆಂಟ್ ನವುಕರಿಗೆ ಶೇರುವಂಥಾವರ ವಿಷಯದಲ್ಲಿ 20 ವರುಷ ಆರು ತಿಂಗಳುಗಳ ವಯಸ್ಸು ಪೂರೈಸಿದ ತಾರೀಖಿನಿಂದಲೂ, "ಅಪೂರ್ವ ಸಂದರ್ಭಗಳಲ್ಲಿ ಗವರ್ಮೆಂಟಿನವರಿಂದ ಪ್ರತ್ಯೇಕವಾಗಿ ವಿನಾಯಿಸಲ್ಪಟ್ಟಿದ್ದ ಹೊರ್ತು, ಇಷೂರ್ಮೆಸಿ ಅವಶ್ಯಕವಾಗಿರತ "ಕ್ಕದ್ದು. 45 ವರುಷಗಳ ವಯಸ್ಸು ಮೀರಿದ ಯಾ 10 ರೂಪಾಯಿಗಳ ತಲಬಿಗೆ ಕೀಳ್ಪಟ್ಟ ಯಾವ ಆಫಿಸರರು ಮೊದಲಿನ ಯಾ ಆ "ತರುವಾಯದ ಇಷೂರ್ಮೆಸಿಗೆ ಅರ್ಹರಾಗಿರುವದಿಲ್ಲ."

ತಾರೀಖು 1ನೇ ಸೆಪ್ಟಂಬರ್ 1896.

ನಂ. 2421.—ರೆ. ಫೈ. 23—96, ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ. ಎ. ಯವರಿಗೆ, 1896ನೇ ಆಗಸ್ಟ್ 28ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾವಧ್ಯ ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 2432.—ರೆ. 883, ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮಸ್ಟರ್ ಚಂಗಯ್ಯ ಜಟ್ಟಿಯವರಿಗೆ, 1896ನೇ ಆಗಸ್ಟ್ 27ನೇ ಮರುಕ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾವಧ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 2338.—ಫಾ. ಫೈ. 90—95, ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 188ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟು ಫಾರೆಸ್ಟುಗಳ ಡೆಪ್ಯುಟಿ ಕಂಜರ್‌ವೇಟರ್ ಮೆಸ್ಟರ್ ಟಿ. ಅಬ್ದುಲ್‌ಕರೀಂ ಯವರಿಗೆ, 1896ನೇ ಸೆಪ್ಟಂಬರ್ 5ನೇ ಮರುಕ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾವಧ್ಯ ಎರಡು ತಿಂಗಳೂ ಏಳು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಕಡ್ಡದೇವನಕೋಟೆ ಸಬ್ ಡಿವಿಜನಿನ ಅಸಿಸ್ಟೆಂಟ್ ಕಂಜರ್‌ವೇಟರ್ ಮೆಸ್ಟರ್ ಎಂ. ಜಿ. ರಾಮರಾಯರು ತಮ್ಮ ಕೆಲಸಗಳೊಂದಿಗೆ ಸದರೀ ಮೆಸ್ಟರ್ ಅಬ್ದುಲ್‌ಕರೀಂಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಫಾರೆಸ್ಟುಗಳ ಡೆಪ್ಯುಟಿ ಕಂಜರ್‌ವೇಟರ ಆಫಿಸಿನ ಛಾರ್ಜಿನಲ್ಲಿ ಇರತಕ್ಕದ್ದು.

ತಾರೀಖು 4ನೇ ಸೆಪ್ಟಂಬರ್ 1896.

ನಂ. 2537—ರೆ. ಫೈ. 38—96, ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಏ. ಆರ್. ತ್ಯಾಗರಾಜ ಆಯ್ಯರ್ ಯವರಿಗೆ, 1896ನೇ ಆಗಸ್ಟ್ 21ನೇ ಮರುಕ್ಕಮಿನಲ್ಲಿ ಒಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 2558.—ರೆ. ಫೈ. 33—96, ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 188ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಕೆ. ಶ್ರೀನಿವಾಸರಾಯರಿಗೆ, 1896ನೇ ಆಗಸ್ಟ್ 4ನೇ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 2566.—ರೆ. ಫೈ. 37—96, ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ತಾಲ್ಲೂಕು ಅಮಲ್‌ದಾರ್ ಸಿ. ರಾಜಗೋಪಾಲಾಚಾರ್ ಯವರಿಗೆ, 1896ನೇ ಆಗಸ್ಟ್ 29ನೇ ಮರುಕ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾವಧ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ತಾಲ್ಲೂಕು ಶಿರಸ್ತೇದಾರ್ರು ಸದರೀ ತಾಲ್ಲೂಕಿನ ಅಮಲ್‌ದಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿ, ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 5ನೇ ಸೆಪ್ಟಂಬರ್ 1896.

ನಂ. 2555.—ರೆ. ಫೈ. 33—96, ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಕೆ. ಶ್ರೀನಿವಾಸರಾಯರಿಗೆ, 1896ನೇ ಜುಲೈ 28ನೇ ಮರುಕ್ಕಂ 1005.—ರೆ. 403ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ 15 ದಿನಗಳ ಕ್ಯಾಜುಯಲ್ ರಜಾ ಪೈಕಿ 7 ದಿನಗಳು ಮಾತ್ರ ಉಪಯೋಗಿಸಿಕೊಂಡದ್ದರಿಂದ ಉಪಯೋಗಿಸಿಕೊಳ್ಳದ ರಜಾ ಭಾಗ ಅಂದರೆ 8 ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರಿಟೆರಿ.

ಪಬ್ಲಿಕ್‌ವರ್ಕ್ಸ್.

ಇಸ್ತಿಹಾರ್‌ನಾಮೆ.

ತಾರೀಖು 27ನೇ ಆಗಸ್ಟ್ 1896.

ನಂ. 479.—ಬೀರೂರಿಂದ ಶಿವಮೊಗ್ಗೆಗೆ ಪುಮಾರು 38½ ಮೈಲಿಗಳ ಘಾಸಲೆ ರೈಲ್ವೇ ಲೈನು ಹಾಕುವ ಬಗ್ಯಾಗಿ ದರಖಾಸ್ತುಗಳು ಇದರಿಂದ ಅಪೇಕ್ಷಿಸಲ್ಪಡುತವೆ.

2. ಮಾಡಬೇಕಾಗಿರುವ ಪ್ರತಿ ತರಹೇದ ಕಾಮಗಾರಿಗೂ ದರಖಾಸ್ತುಗಳು "ರೇಟುಗಳ ಷೆಡ್ಯೂಲ್" ನಮೂನೆಯಲ್ಲಿ ಇರತಕ್ಕದ್ದು.

3. ಕಾಮಗಾರಿಯು ಮೂರುಭಾಗಗಳಾಗಿಯೂ ಪೆಂಕೀಪುರದ ಹೊಸಶೇಷುವೆ ಮತ್ತು ಅವರ ಕಟ್ಟೆಗಳು ಪ್ರತ್ಯೇಕ ಕಂಟ್ರ್ಯಾಕ್ಟಿಗಿಯೂ ಕೊಡಲ್ಪಡುವದು. ಸದರೀ ಕಾಮಗಾರಿಯಲ್ಲಿ ಪರ್ಮನೆಂಟ್ ವೇ ವ ಕ್ಟೈರ್ಷ್ ಯಂತ್ರಗಳು ಹೊರತಾಗಿ ವಿಸಿಷ್ಟ ಕೆಲಸವೂ ಅಡಗಿರುವದು. ಅಪೇಕ್ಷಿಸುವ ಕಂಟ್ರ್ಯಾಕ್ಟರುಗಳು ವಂದು ಭಾಗಕ್ಕೆ ಜಾಸ್ತಿಯಾಗಿ ಪ್ರತ್ಯೇಕ ದರಖಾಸ್ತು ಮಾಡುವದಕ್ಕೆ ಸ್ವತಂತ್ರರಾಗಿರುತ್ತಾರೆ.